**ಕಲ್ಲೇಶಿ:** ನನ್ನ ಹೆಂಡತಿ ತುಂಬಾ ಸಿಡುಕಿನ ಸ್ವಭಾವದವಳು. ಚಿಕ್ಕ ಚಿಕ್ಕ ವಿಷಯಕ್ಕೆಲ್ಲಾ ಸಿಟ್ಟು ಮಾಡ್ಕೋತಾಳೆ.

**ಮಲ್ಲೇಶಿ:** ನನ್ನ ಹೆಂಡತಿ ಕೂಡ ಹಾಗೇ ಮಾಡ್ತಿದ್ದಳು. ಆದರೆ ಇವಾಗ ತುಂಬಾ ಸೈಲೆಂಟ್ ಆಗಿದ್ದಾಳೆ.

**ಕಲ್ಲೇಶಿ:** ಹೌದಾ ಹೇಗೆ? ಏನ್ ಮಾಡಿದೆ?

**ಮಲ್ಲೇಶಿ:** ಹೀಗೆ ಒಮ್ಮೆ ನನ್ನ ಹೆಂಡತಿ ಸಿಟ್ಟು ಮಾಡಿಕೊಂಡಿದ್ದಳು. ಅದಕ್ಕೆ ನಾನು, 'ವಯಸ್ಸಾದ ಮೇಲೆ ಈ ರೀತಿ ಸಿಟ್ಟು ಜಾಸ್ತಿ ಆಗ್ತಾ ಹೋಗತ್ತೆ. ಅದನ್ನು ಕಂಟ್ರೋಲ್ ಮಾಡ್ಕೋಬೇಕು' ಅಂದೆ. ಅದೇ ಕೊನೆ ಮತ್ತ್ಯಾವತ್ತೂ ಆಕೆ ಸಿಟ್ಟು ಮಾಡಿಕೊಳ್ಳಲಿಲ್ಲ. ಏರು ಧ್ವನಿಯಲ್ಲಿ ಮಾತನಾಡಲಿಲ್ಲ!

***

**ಟೀಚರ್:** ಕೋಲಾರದಲ್ಲಿ ಚಿನ್ನದ ಗಣಿ ಇದೆ. ಕುದುರೆ ಮುಖದಲ್ಲಿ ಏನಿದೆ?

**ಬಂಟಿ:** ಟೀಚರ್ ನೀವು ಕುದುರೆ ಮುಖ ನೋಡೇ ಇಲ್ವಾ? ಅದ್ರಲ್ಲಿ ಕಣ್ಣು, ಕಿವಿ, ಮೂಗು, ಬಾಯಿ ಇದೆ.

***




**ಸೋಮಣ್ಣ:** ಈಗಿನ ಕಾಲದಲ್ಲಿ ಲಂಚ ಕೊಡದೇ ಏನ್ ಕೆಲಸನೂ ಆಗೋಲ್ಲ. ಏನ್ ಅಂತೀರಾ ನೀವು?

**ಭೀಮಣ್ಣ:** ಉತ್ತರ ಹೇಳ್ತೀನಿ, ನನಗೆಷ್ಟು ಲಂಚ ಕೊಡ್ತೀರಿ ಹೇಳಿ ಮೊದಲು?

***

**ಆಟೊಡ್ರೈವರ್:** ಸಾರಿ ಸರ್. ಮೀಟರ್ ಹಾಕೋದು ಮರೆತುಬಿಟ್ಟೆ!

**ಗುಂಡ:** ಪರ್ವಾಗಿಲ್ಲ ಬಿಡಿ, ನಾನೂ ಪರ್ಸ್ ತರೋದು ಮರೆತೇ ಬಿಟ್ಟೆ.

***

**ಟೀಚರ್:** ಪಾದರಸವೆಂದರೇನು?

**ಗುಂಡ:** ಪಾದವನ್ನು ಒತ್ತಿ ಹಿಡಿದಾಗ ಬರುವ ರಸವೇ ಪಾದರಸ ಮಿಸ್!

***

**ಮೇಷ್ಟ್ರು:** ಆಕ್ಸ್‌ಫರ್ಡ್ ಎಂದರೇನು?

**ಗುಂಡ:** ಆಕ್ಸ್ ಅಂದರೆ ಎತ್ತು, ಫರ್ಡ್ ಅಂದರೆ ಗಾಡಿ. ಎರಡೂ ಸೇರಿದ್ರೆ ಆಕ್ಸ್‌ಫರ್ಡ್ ಅರ್ಥಾತ್ ಕನ್ನಡದಲ್ಲಿ ಎತ್ತಿನಗಾಡಿ ಸರ್!

***

**ಸಂದರ್ಶಕ:** ಗುಂಡ, ಕೆಲಸ ಗಿಟ್ಟಿಸಲು ನಿನಗೆ ಒಂದು ಆಫರ್ ಇದೆ.

**ಗುಂಡ:** ಏನದು ಸರ್?

**ಸಂದರ್ಶಕ:** ಕಷ್ಟವಾದ ಒಂದೇ ಪ್ರಶ್ನೆ ಬೇಕಾ ಅಥವಾ ಸುಲಭದ ಹತ್ತು ಪ್ರಶ್ನೆ ಬೇಕಾ?

**ಗುಂಡ:** ಕಷ್ಟವಾದ ಒಂದು ಪ್ರಶ್ನೆ ಸಾಕು ಸರ್.

**ಸಂದರ್ಶಕ:** ಓಕೆ ಹಾಗಾದ್ರೆ ದಿನವೊಂದರಲ್ಲಿ ಹಗಲು ಮೊದಲು ಬರುತ್ತಾ ರಾತ್ರಿ ಬರುತ್ತಾ?

**ಗುಂಡ:** ಹಗಲು ಸರ್.

**ಸಂದರ್ಶಕ:** ಹೇಗೆ?

**ಗುಂಡ:** ಸರ್, ನೀವು ಹೇಳಿದ್ದು ಒಂದೇ ಪ್ರಶ್ನೆ ಕೇಳ್ತೀನಿ ಅಂತ!

**ಮತ್ತೊಬ್ಬ ಸಂದರ್ಶಕ:** ಯಸ್ ಗುಂಡ... ನೀನು ಕೆಲಸಕ್ಕೆ ಸೆಲೆಕ್ಟ್ ಆಗಿದ್ದೀಯ.

***

ಗುಂಡನಿಗೆ ಆಕ್ಸಿಡೆಂಟ್ ಆಗಿ ಆಸ್ಪತ್ರೆಗೆ ದಾಖಲಾದ.

**ಡಾಕ್ಟರ್:** ಏಟು ಬಿದ್ದ ಜಾಗದಲ್ಲಿ ಈ ಆಯಿಂಟ್‌ಮೆಂಟ್ ಅನ್ನು ದಿನಕ್ಕೆ ಎರಡು ಸಲ ಹಚ್ಚಿ.

**ಗುಂಡ:** ಸಾಧ್ಯವೇ ಇಲ್ಲ ಡಾಕ್ಟರ್.

**ಡಾಕ್ಟರ್:** ಏಕೆ ಸಾಧ್ಯವಿಲ್ಲ?

**ಗುಂಡ:** ಏಟು ಬಿದ್ದಿದ್ದ ಜಾಗ ಇಲ್ಲಿಂದ 150 ಕಿಮೀ ದೂರದ ಕಾಡಿನಲ್ಲಿದೆ. ಅದಕ್ಕೆ!

***

ಐಸಿಯುನಲ್ಲಿದ್ದ 95 ವರ್ಷದ ಅಜ್ಜನಿಗೆ ಹೀಗೆ ಹೇಳಿದರು.

**ಡಾಕ್ಟರ್:** ನಾಳೆ ನೀವು ನಿಮ್ಮ ಹೆಂಡತಿಯನ್ನು ಭೇಟಿ ಆಗಬಹುದು.

**ಅಜ್ಜ:** ಡಾಕ್ಟ್ರೇ... ನನ್ನ ಹೆಂಡತಿ ಸತ್ತು ಸ್ವರ್ಗದಲ್ಲಿ ಇದ್ದಾಳೆ.

**ಡಾಕ್ಟರ್:** ಅದು ಗೊತ್ತಿದ್ದೇ ಹೇಳಿದ್ದು!

***

**ಸುಬ್ಬಿ:** ಯಾಕ್ರಿ! ಒಳಗಡೆಯಿಂದ ಹೊರಗೆ, ಹೊರಗಡೆಯಿಂದ ಒಳಗೆ ಓಡಾಡುತ್ತಿದ್ದೀರಾ?

**ಸುಬ್ಬ:** ಏನಿಲ್ಲ ಕಣೇ, 'ಉಸಿರನ್ನು ಒಳಗಡೆ ತೆಗೆದುಕೊಂಡು ಹೊರಗಡೆ ಬಿಡಬೇಕು' ಅಂತ ನಿನ್ನೆ ಯೋಗ ಗುರುಗಳು ಹೇಳುತ್ತಿದ್ದರು. ಅದಕ್ಕೆ ಬೆಡರೂಮ್‌ನಲ್ಲಿ ಉಸಿರು ತೆಗೆದುಕೊಂಡು ಹೊರಗಡೆ ಕಂಪೌಂಡ್ ಹತ್ತಿರ ಬಿಡುತ್ತಿದ್ದೇನೆ!

***

**ಗುಂಡ:** ಮಳೆ ಜೋರು ಬರ್ತಾ ಇದೆ. ಆಫೀಸಿಗೆ ಬರಲೇ ಬೇಕಾ ಸರ್?

**ಬಾಸ್:** ನೋಡಿ ಆಫೀಸಿಗೆ ಬಂದು ಕೆಲಸ ಮಾಡ್ತಿರೋ ಅಥವಾ ದಿನಾ ಪೂರ್ತಿ ಹೆಂಡತಿ ಹೇಳಿದಂತೆ ಮನೆಕೆಲಸ ಮಾಡ್ತಿರೋ. ಆಯ್ಕೆ ನಿಮಗೆ ಬಿಟ್ಟದ್ದು.

**ಗುಂಡ:** ಅಯ್ಯೋ ಸರ್, ನನ್ನ ಕಣ್ಣು ತೆರೆಸಿದ್ರಿ. ಈಗ್ಲೇ ಬಂದೆ ಆಫೀಸಿಗೆ.

***

**ಸುಬ್ಬರಾಯರು:** ಮೊದಲ ಮಗ ಎಂ.ಬಿ.ಎ., ಎರಡನೆಯ ಮಗ ಎಂ.ಎ., ಮೂರನೆಯ ಮಗ ಪಿ.ಎಚ್.ಡಿ. ಓದುತ್ತಿದ್ದಾರೆ. ನಾಲ್ಕನೆಯ ಮಗ ಕಳ್ಳತನ ಮಾಡ್ತಾನೆ!

**ರಾಮರಾಯರು:** ಕಳ್ಳತನವೇ... ಅದು ಗೊತ್ತಿದ್ದೂ ನೀವು ಅವನನ್ನು ಮನೆಯಿಂದ ಓಡಿಸಲಿಲ್ಲವೇ?

**ಸುಬ್ಬರಾಯರು:** ಅವನೊಬ್ಬನೇ ದುಡಿತಾ ಇರೋದು ಉಳಿದವರು ನಿರುದ್ಯೋಗಿಗಳು.

***

ಒಬ್ಬ ಪ್ರವಾಸಿ ಪೊಲೀಸ್ ಪೇದೆಗೆ ಹೀಗೆ ಕೇಳಿದ.

**ಪ್ರವಾಸಿ:** ಸರ್, ಇದು ಅಪಾಯ ವಲಯವಲ್ಲ. ಆಗಿದ್ದರೂ ಕಾರನ್ನು ನಿಧಾನವಾಗಿ ಚಲಿಸಿ ಅನ್ನುವ ಬೋರ್ಡನ್ನು ಇಲ್ಲಿ ಹೆಜ್ಜೆ ಹೆಜ್ಜೆಗೂ ಯಾಕೆ ಹಾಕಿದ್ದಾರೆ?

**ಪೊಲೀಸ್ ಪೇದೆ:** ಹತ್ತಿರದಲ್ಲಿ ಎಲ್ಲಿಯೂ ಆಸ್ಪತ್ರೆ ಇಲ್ಲ ಅದಕ್ಕೆ.

***

**ಜೈಲರ್:** ಏನಪ್ಪಾ... ನಿನ್ನ ನೋಡೊಕೆ ಯಾರು ಬರ್ತಾ ಇಲ್ವಲ್ಲ ಯಾಕೆ?




**ಖೈದಿ:** ಹೇಗೆ ಬರ್ತಾರೆ ಸರ್. ನನ್ನ ಇಡೀ ಫ್ಯಾಮಿಲಿ ಜೈಲಿನಲ್ಲೇ ಇದೆ.

***

**ಡಾಕ್ಟರ್:** ನಿಮ್ಮ ಕಾಯಿಲೆ ಪತ್ತೆ ಹಚ್ಚಲು ಆಗುತ್ತಿಲ್ಲ. ಬಹುಶಃ ಈ ಕಾಯಿಲೆಯು ಕುಡಿತದಿಂದ ಆಗಿದ್ದಿರಬೇಕು.

**ಗುಂಡ:** ಸರಿ ಡಾಕ್ಟರ್ ನಾನು ನಿಮ್ಮ ನಶೆ ಇಳಿದ ಮೇಲೆ ಬರ್ತೀನಿ!

***

**ತಿಮ್ಮ:** ಗುಂಡ ಎದ್ದೇಳೋ ಭೂಕಂಪ ಆಗ್ತಿದೆ ಮನೆ ಪೂರ್ತಿ ಅಲುಗಾಡ್ತಾ ಇದೆ.

**ಗುಂಡ:** ಸುಮ್ನೆ ಮಲ್ಕೊಳ್ಳೋ... ಮನೆ ಬಿದ್ದರೆ ಓನರ್‌ದು ತಾನೇ ಬೀಳೋದು! ನಮ್ಗೇನಾದ್ರೂ ಲಾಸ್ ಆಗುತ್ತಾ?

ಸಂಗ್ರಹ: ಶರದ ಕುಲಕರ್ಣಿ, ಬೀದರ್